# 2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ
# ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 55/2022

**ಪಿರ್ಯಾದುದಾರರು** ಃ ತಾವರೆಕೆರೆ ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿ** ಃ ಪ್ರಕಾಶ್ ಸಿ ಬಿನ್ ಲೇಟ್ ಚನ್ನಬಸವಯ್ಯ
ವಯಸು 54 ವರ್ಷ
ವಾಸಃ ಸೆಕ್ರೆಟರಿ, ಬಾಚೇನಹಟ್ಟಿ ಪಂಚಾಯಿತಿ,
ಪಾಲೇನಹಳ್ಳಿ, ಸೋಲೂರು ಹೋಬಳಿ,
ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ.

## <u>ದೋಷಾರೋಪಣೆ</u>

(ಶ್ರೀಮತಿ. ರಂಜಿತ ಜಿ.ಬಿ, ಬಿ.ಬಿಎ., ಎಲ್‌ಎಲ್.ಬಿ(ಆನರ್ಸ್) 2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮಾಗಡಿ ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮ ಮೇಲೆ ಹೊರೆಸುವ ಆಪಾದನೆ)
ಪ್ರಕಾಶ್ ಸಿ. ಎಂಬ ನೀವು

ಮಾನ್ಯ ಘನ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವ, ತಾವರೆಕೆರೆ ಪೋಲೀಸ್ ಠಾಣೆಯ ಸರಹದ್ದು, ಕಸಬಾ ಹೋಬಳಿ ಬಾಚೇನಹಟ್ಟಿ ಗ್ರಾಮ ಪಂಚಾಯ್ತಿಯ ಕಲ್ಲೂರು ಗ್ರಾಮದ ಖಾನೇಸುಮಾರಿ ಹಳೆ ಖಾತೆ ನಂ. 7/6 ಮತ್ತು 11/8 ನ್ನು ಒಂದು ಗೂಡಿಸಿರುವ ಎಂ.ಆರ್ 4/1976-77 ರ ಮಂಡಲ್ ಪಂಚಾಯಿತಿ ಖಾತಾ ನಂ.88/108 ರಲ್ಲಿನ ನಿವೇಶನ ಚಾಸಾ-1 ರವರ ತಂದೆ ಲೇಟ್ ತೋಟದಯ್ಯನವರ ಹೆಸರಿನಲ್ಲಿರುತ್ತದೆ. ವ್ಯವಸ್ಥಾಪತ್ರದ ಮೂಲಕ ಚಿಕ್ಕನರಸಯ್ಯನ ಹೆಂಡತಿ ಲಕ್ಷ್ಮಿನರಸಮ್ಮ ರವರ ಬಾಬ್ತು ಕಲ್ಲೂರು ಗ್ರಾಮದ ಹಳ್ಳಿ ಪಂಚಾಯಿತಿ ಖಾನೇಸುಮಾರಿ ನಂ.6/1 ರಲ್ಲಿನ ನಿವೇಶನ ವ್ಯವಸ್ಥಾ ಪತ್ರದ ಮೂಲಕ ಬಂದಿದ್ದು, ಅದು ಗ್ರೂಪ್ ಪಂಚಾಯಿತಿಯಲ್ಲಿ ಬದಲಾದ ನಂ.12/2017, ಮಂಡಲ್ ಪಂಚಾಯ್ತಿಯಲ್ಲಿ 96/101, ಆಗಿದ್ದು, ಹಾಲಿ 96/101 ರಲ್ಲಿ ಚಾಲ್ತಿಯಲ್ಲಿರುತ್ತದೆ. ನೀವು, ಚಾಸಾ-7 ರವರು ಕಲ್ಲೂರು ಗ್ರಾಮದ ಖಾನೇಸುಮಾರಿ ನಂ.6/1 ರಲ್ಲಿ ನಿವೇಶವನ್ನು ತನ್ನ ಹೆಸರಿಗೆ ಖಾತೆ ಮಾಡಲು ದಿನಾಂಕ 19-11-2012 ರಂದು ಬಾಚೇನಹಟ್ಟಿ ಗ್ರಾಮ ಪಂಚಾಯ್ತಿಗೆ ಮನವಿ

ಪತ್ರವನ್ನು ಸಲ್ಲಿಸಿಕೊಂಡಿದ್ದು ಸದರಿ ಖಾತೆಗೆ ಸಂಬಂಧಪಟ್ಟಂತೆ ಚಾಸಾ-1 ರವರು ದಿ.14-12-2012 ರಂದು ಚಾಸಾ-2 ರವರು ದಿ.27-12-2012 ರಂದು ಚಾಸಾ-7 ರವರಿಗೆ ಖಾತೆ ಮಾಡುವ ಬಗ್ಗೆ ತಕರಾರು ಅರ್ಜಿಯನ್ನು ಸಲ್ಲಿಸಿಕೊಂಡಿರುತ್ತಾರೆ. ಈ ಬಗ್ಗೆ ನೀವು ಸ್ಥಳ ಪರಿಶೀಲನೆ ಮಾಡದೇ ಖಾನೇಸುಮಾರಿ ನಂ.88/108 ಚೆಕ್ ಬಂಧಿಯನ್ನು ಸಾಕ್ಷಿಯವರು ನೀಡಿದ್ದ ಖಾನೇಸುಮಾರಿ 6/1 ಕ್ಕೆ ಸೇರಿ ಚಾಸಾ-1 ರವರಿಗೆ ಮೋಸ ಮಾಡುವ ಉದ್ದೇಶದಿಂದ ದಿ.05-01-2023 ರಂದು ಚಾಸಾ-1 ರವರಿಗೆ ಖಾನೇಸುಮಾರಿ ನಂ.6/1 ನ್ನು ಹೊಸ ಖಾತಾ ನಂ.175/185 ರೀತ್ಯ ಖಾತೆಯನ್ನು ಮಾಡಿಕೊಟ್ಟಿರುತ್ತಾರೆ. ನಂತರ ಚಾಸಾ-1 ರವರು ದಿ.19-11-2012 ರಂದು ಚಾಸಾ-7 ರವರಿಗೆ ಖಾತೆ ನಂ.175/185 ರಲ್ಲಿ ಮಾಡಿಕೊಟ್ಟಿರುವ ದಾಖಲಾತಿಗಳ ಬಗ್ಗೆ ಮಾಹಿತಿ ಹಕ್ಕು ಕಾಯಿದೆ ಅಡಿಯಲ್ಲಿ ದಾಖಲಾತಿಗಳನ್ನು ನೀಡುವಂತೆ ಅರ್ಜಿಯನ್ನು ಸಲ್ಲಿಸಿಕೊಂಡಿದ್ದು, ಈ ಬಗ್ಗೆ ನೀವು, ಚಾಸಾ-1 ರವರಿಗೆ ದೃಢೀಕೃತ ದಾಖಲಾತಿಗಳನ್ನು ನೀಡಿದ್ದು, ಇದರಲ್ಲಿ ಆರೋಪಿಯು ಸ್ಥಳಕ್ಕೆ ಭೇಟಿ ನೀಡಿ ಮಹಜರ್‌ನಲ್ಲಿ ದಿನಾಂಕವನ್ನು ಖಾಲಿ ಬಿಟ್ಟು ಹಾಗೂ ಚಾಸಾ-7 ರವರ ಸಹಿಯನ್ನು ಪಡೆಯದೆ ಇರುವ ದಾಖಲಾತಿಯನ್ನು ನೀಡಿರುತ್ತಾರೆ. ನಂತರ ಚಾಸಾ-1 ರವರು ದಿ.24-06-2014 ರಂದು ಚಾಸಾ-1 ರವರು 2 ನೇ ಸಾರಿ ಚಾಸಾ-7 ರವರಿಗೆ ಖಾತೆ ನಂ.175/185 ರಲ್ಲಿ ಮಾಡಿಕೊಟ್ಟಿರುವ ದಾಖಲಾತಿಗಳ ಬಗ್ಗೆ ಮಾಹಿತಿ ಹಕ್ಕು ಕಾಯಿದೆ ಅಡಿಯಲ್ಲಿ ದಾಖಲಾತಿಗಳನ್ನು ನೀಡುವಂತೆ ಅರ್ಜಿ ಸಲ್ಲಿಸಿಕೊಂಡಿದ್ದು,ಈಬಗ್ಗೆ ನೀವು ಚಾಸಾ-1 ರವರಿಗೆ ದೃಢೀಕೃತ ದಾಖಲಾತಿಗಳನ್ನು ನೀಡಿದ್ದು, ಇದರಲ್ಲಿ ಆರೋಪಿಯು ಸ್ಥಳಕ್ಕೆ ಭೇಟಿ ನೀಡಿ ನಡೆಸಿದ ಮಹಜರ್ ನಲ್ಲಿ ದಿ.26-12-2012 ಎಂದು ಬರೆದು ಮಹಜರ್ ನ ಚೆಕ್ ಬಂಧಿಯ ಕೆಳಭಾಗದಲ್ಲಿ ಲಕ್ಷ್ಮಮ್ಮ ರವರ ಹೆಬ್ಬೆಟ್ಟು ಹಾಕಿರುತ್ತಾರೆ. ಇದಕ್ಕೆ ಲಗತ್ತಾಗಿ ಅದೇ ದಿ.26-12-2012 ಕ್ಕೆ ಮತ್ತೊಂದು ಮಹಜರ್ ಜರುಗಿಸಿ ದೃಢೀಕೃತ ದಾಖಲೆಯನ್ನು ಚಾಸಾ-1 ರವರಿಗೆ ನೀಡಿರುತ್ತಾರೆ. ನಂತರ ಚಾಸಾ-1 ರವರು ದಿ.16-03-2016 ರಂದು ಪುನಃ3 ನೇ ಸಾರಿ ಚಾಸಾ-7 ರವರಿಗೆ ಖಾತೆ ಸಂ.175/185 ರಲ್ಲಿ ಮಾಡಿಕೊಟ್ಟಿರುವ ದಾಖಲಾತಿಗಳ ಬಗ್ಗೆ ಮಾಹಿತಿ ಹಕ್ಕು ಕಾಯಿದೆ ಅಡಿಯಲ್ಲಿ ದಾಖಲಾತಿಗಳನ್ನು ನೀಡುವಂತೆ ಅರ್ಜಿ ಸಲ್ಲಿಸಿಕೊಂಡಿದ್ದು, ಈ ಬಗ್ಗೆ ನೀವು ಚಾಸಾ-1 ರವರಿಗೆ ದೃಢೀಕೃತ ದಾಖಲಾತಿಗಳನ್ನು ನೀಡಿದ್ದು, ಇದರಲ್ಲಿ ನೀವು ಸ್ಥಳಕ್ಕೆ ಭೇಟಿ ನೀಡಿ

ನಡೆಸಿದ ಮಹಜರ್ ನಲ್ಲಿ ದಿ.26-12-2012 ರಂದು ಜರುಗಿಸಿದ ಮಹಜರ್ ಕ್ರಮದ 2 ನೇ ಪುಟದಲ್ಲಿ ಚಿಕ್ಕನರಸಯ್ಯನವರು ನನ್ನ ಹೆಂಡತಿ ಲಕ್ಷ್ಮಮ್ಮ ಎಂದು ಬರೆದಿದ್ದನ್ನು ಹೆಂಡತಿ ಎಂಬ ಪದವನ್ನು ಹೊಡೆದು ಅದರ ಮೇಲೆ ಸೊಸೆಯಾದ ಎಂದು ಬರೆದಿರುತ್ತದೆ, ಸರ್ಕಾರಿ ನೌಕರನಾದ ನೀವು ಚಾಸಾ-1 ರವರಿಗೆ ಮೋಸ ಮಾಡುವ ಉದ್ದೇಶದಿಂದ ದಾಖಲಾತಿಗಳನ್ನು ಸರಿಯಾಗಿ ನಿರ್ವಹಣೆ ಮಾಡದೆ ಇರುವುದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ-167 ರೀತ್ಯ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಎರಡನೆಯದಾಗಿ, ಮೇಲ್ಕಂಡ ಸ್ಥಳ ಮತ್ತು ಖಾನೇಸುಮಾರಿ ನಂ.6/1 ಕ್ಕೆ ಸಂಬಂಧಿಸಿದಂತೆ ಚಾಸಾ-7 ರವರು ಕಲ್ಲೂರು ಗ್ರಾಮದ ಖಾನೇಸುಮಾರಿ ನಂ.6/1 ರ ಖಾತೆ ಮಾಡಲು ಸಲ್ಲಿಸಿದ ಅರ್ಜಿ ಮೇರೆಗೆ ಸರ್ಕಾರಿ ನೌಕರನಾದ ನೀವು ದಾಖಲಾತಿಗಳನ್ನು ಸರಿಯಾಗಿ ನಿರ್ವಹಣೆ ಮಾಡದೇ ಚಾಸಾ-1 ರವರು 7 ರವರಿಗೆ ಖಾತೆ ಮಾಡದಂತೆ ಸಲ್ಲಿಸಿದ ತಕರಾರು ಅರ್ಜಿಯನ್ನು ಪರಿಗಣಿಸದೇ ಚಾಸಾ-1 ರವರು ಮಾಹಿತಿ ಹಕ್ಕಿ ನಡಿಯಲ್ಲಿ ಸಲ್ಲಿಸಿದ ಅರ್ಜಿಗೆ ಪ್ರತಿ ಬಾರಿಯೂ ಒಂದೊಂದು ರೀತಿ ದಾಖಲಾತಿಗಳನ್ನು ತಿದ್ದಿನೀಡಿ ಚಾಸಾ-1 ರವರಿಗೆ ವಂಚನೆ ಮಾಡುವ ಉದ್ದೇಶದಿಂದ ಹಳೆ ಖಾತೆ ನಂ.7/6 ಹೊಸ ಖಾತೆ ನಂ.88/108 ನಿವೇಶನದ ಚೆಕ್ ಬಂಧಿಯನ್ನು ಖಾತಾ ಸಂ.6/1 ರ ಚೆಕ್ ಬಂದಿಗೆ ನೀಡಿ ಹೊಸ ಖಾತೆ ನಂ.175/185 ರಲ್ಲಿ ಚಾಸಾ-7 ರವರ ಹೆಸರಿಗೆ ಖಾತೆ ಮಾಡಿ ಕೊಟ್ಟಿರುವುದು ತನಿಖೆಯಿಂದ ದೃಢಪಟ್ಟಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ-420 ರೀತ್ಯ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

**ಪ್ರಶ್ನೆ-1 ಃ ನಿಮ್ಮ ಮೇಲಿನ ಆಪಾದನೆಯ ಸಾರವನ್ನು ಓದಿ, ವಿವರಿಸಿ ಹೇಳಿದಾಗ ನಿಮಗೆ ಅರ್ಥವಾಯಿತೆ?**

**ಆರೋಪಿಯ ರವರ ಉತ್ತರ ಃ**

**ಪ್ರಶ್ನೆ-2 ಃ ನೀವು ನಿಮ್ಮ ತಪ್ಪನ್ನು ಒಪ್ಪುಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಇಚ್ಚಿಸುವಿವರೋ ?**

**ಆರೋಪಿ ರವರ ಉತ್ತರ ಃ**

ಈ ಮೇಲ್ಕಂಡ ಆಪಾದನೆಗಳನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುವುದಾಗಿ ಈ ಮೂಲಕ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ.

(ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ ಸರಿ ಇದೆಯೆಂದು ನನ್ನ ಸಮಕ್ಷಮ ದಿನಾಂಕ **08-05-024** ರಂದು ಸಹಿಯನ್ನು ಮಾಡಿರುತ್ತೇನೆ.)

**(ರಂಜಿತ ಜಿ.ಬಿ)**
**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಮಾಗಡಿ.**

**ಆರೋಪಿಯ ಸಹಿಃ**